ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ., ನ್ಯಾಯಾಲಯ, ಉಡುಪಿ.

ಎಂ.ವಿ.ಸಿ.:1064/2024

ಆರ್ .ಡಬ್ಲೂ : 1

| | |
|---|---|
| ಸಾಕ್ಷಿದಾರರ ಹೆಸರು | ಶಶಿಧರ ಪೂಜಾರಿ |
| ತಂದೆಯ ಹೆಸರು | ಚೋಂಗ್ಲ ಪೂಜಾರಿ |
| ವಯಸ್ಸು | 53 ವರ್ಷ |
| ಉದ್ಯೋಗ | ಪೈಂಟಿಂಗ್ |
| ವಾಸಸ್ಥಳ | ಮಣಿಪಾಲ |

ದಿನಾಂಕಃ 16-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ **2 ನೇ ಎದುರುದಾರರ ಪರವಾಗಿ ಶ್ರೀ ಎ.ಎಂ. ವಕೀಲರವರಿಂದಃ**

ಅಪಘಾತವಾದ ಕಾಲದಲ್ಲಿ ನಾನು ಮಣಿಪಾಲದ ಸರಳಬೆಟ್ಟುವಿನಲ್ಲಿ ವಾಸವಾಗಿದ್ದೆನು. ಅಪಘಾತವಾದ ಕಾಲದಲ್ಲಿ ನನ್ನ ಬಳಿ ದ್ವಿಚಕ್ರ ವಾಹನ ಇತ್ತು. ನನ್ನ ದ್ವಿಚಕ್ರ ವಾಹನವು ಟಿ.ವಿ.ಎಸ್ ಕಂಪನಿಗೆ ಸೇರಿದ್ದಾಗಿತ್ತು. ಕಳೆದ ಎರಡು ವರುಷದ ಹಿಂದೆ ತಿಂಗಳ ಕೊನೆಯ ಶನಿವಾರದಂದು ಕೊಡಂಕೂರಿನಿಂದ ಸರಳಬೆಟ್ಟುವಿಗೆ ಹೋಗುವಾಗ ಅಪಘಾತವಾಗಿತ್ತು. ಅಪಘಾತವಾದ ದಿನ ಸಂಜೆ 5 ಗಂಟೆಗೆ ಕೊಡಂಕೂರನ್ನು ಬಿಟ್ಟೆನು. ಅಪಘಾತವು 5.30 ರ ಸಮಯಕ್ಕೆ ಆಯಿತು.

ಕೊಡಂಕೂರಿನಿಂದ ಸರಳಬೆಟ್ಟುವಿಗೆ 8 ಕಿ. ಮೀ ಅಂತರವಿದೆ. ಪರ್ಕಳ ದಾಟಿ ಸರಳಬೆಟ್ಟು ಗೆ ಹೋಗಬೇಕು. ಅಪಘಾತವಾದ ದಿನ ನನ್ನ ಜೊತೆ ನನ್ನ ಹೆಂಡತಿ ಕುಳಿತುಕೊಂಡಿದ್ದರು. ಕೊಡಂಕೂರಿನಿಂದ ಹೊರಡುವಾಗಲೇ ನನ್ನ ಹೆಂಡತಿ ನನ್ನೊಂದಿಗೆ ಬಂದಿದ್ದರು. ಸುಮಾರು 40 ಕಿ. ಮೀ ವೇಗದಲ್ಲಿ ವಾಹನ ಚಾಲನೆ ಮಾಡುತ್ತಿದ್ದೆ. ಅಪಘಾತದಿಂದ ನನಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ನಾನು ಚಾಲನೆ ಮಾಡುತ್ತಿದ್ದ ವಾಹನಕ್ಕೂ ಅಪಘಾತದಲ್ಲಿ ಯಾವುದೇ ಜಖಂ ಆಗಿರುವುದಿಲ್ಲ .

ಅಪಘಾತವು ಡಿ. ಸಿ ಕಚೇರಿಗೆ ಹೋಗುವ ಬಸ್ ನಿಲ್ದಾಣದ ಮೂಲೆಯಲ್ಲಿ ಆಗಿರುತ್ತದೆ. ಅಪಘಾತವಾದ ಸ್ಥಳ ದಲ್ಲಿ ರಸ್ತೆ ಡುಬ್ಬ ಇರುತ್ತದೆ. ರಸ್ತೆ ಡುಬ್ಬ ಬಿಳಿ ಬಣ್ಣದಿಂದ ಬಣ್ಣ ಹಚ್ಚಿರುತ್ತಾರೆ. ರಸ್ತೆ ಡುಬ್ಬವನ್ನು ನಾನು 2 ಮೀ ದೂರದಿಂದ ನೋಡಿರುತ್ತೇನೆ. ನಾನು ರಸ್ತೆ ಡುಬ್ಬದಲ್ಲಿ ವಾಹನವನ್ನು ನಿಧಾನ ಮಾಡಲಿಲ್ಲ. (2 ನೇ ಎದುರುದಾರರ ಪರ ವಕೀಲರು 2 ನೇ ಎದುರುದಾರರ ವಾದ ಅರ್ಜಿದಾರರು ಏಕಾ ಏಕಿಯಾಗಿ ವಾಹನದಿಂದ ಜಂಪು ಮಾಡಿದ್ದ ಕಾರಣದಿಂದ ಆಗಿರುತ್ತದೆ. ವಾಹನದ ಸವಾರರ ನಿರ್ಲಕ್ಷ್ಯತೆ ಇರುವುದಿಲ್ಲ ಎನ್ನುವುದಾಗಿದೆ ಅರ್ಜಿದಾರರು ವಾಹನದ ಸವಾರರ ನಿರ್ಲಕ್ಷತೆ ಇದೆ ಎಂದು ಅರ್ಜಿಯಲ್ಲಿ ಕಾಣಿಸಿರುತ್ತಾರೆ ಈ ವಿಚಾರೆಕ್ಕೆ ಸಂಬಂದಿಸಿದಂತೆ ಅರ್ಜಿದಾರರನ್ನು ಪಾಟೀ ಸವಾಲು ಮಾಡಬೇಕೆಂದು ಮನವಿ ಮಾಡಿದ್ದು ಮನವಿಯನ್ನು ಅಂಗೀಕರಿಸಲಾಯಿತು. )

ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ

ಅಪಘಾತಕ್ಕೆ ಸಂಬಂದಿಸಿದಂತೆ ಪೊಲೀಸಿನವರ ತನಿಖೆಯ ಕಾಲದಲ್ಲಿ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಹೌದು. 20-06-2024 ರಂದು ಅಪಘಾತವು ಆಗಿರುವುದು ಎಂದರೆ ಹೌದು. ನಿಮ್ಮ ಹೆಂಡತಿ ದಿಃ 24-06-2024 ರಂದು ಪೊಲೀಸಿನವರಿಗೆ ದೂರು ನೀಡಿರುವುದು ಎಂದರೆ ಹೌದು. ನಿಮ್ಮ ಹೇಂಡತಿಯವರನ್ನು ಆಸ್ಪತ್ರೆಗೆ ಯಾರು ಕರೆದುಕೊಂಡು ಹೋದರು ಎಂದರೆ ಅಲ್ಲಿ ಕೆಲಸ ಮಾಡುತ್ತಿದ್ದವರು ಮತ್ತು ನಾನು ಹೋದೆನು. ಅಪಘಾತವಾಗಿದೆ ಎಂದು ಹೇಳುವ ದಿನ ನಿಮಂ ಹೆಂಡತಿಯವರು ಸೀರೆಯನ್ನು ಧರಿಸಿದ್ದರೇ ಎಂದರೆ ಹೌದು. ನಾಲ್ಕು ದಿನದ ನಂತರ ಪೊಲೀಸಿನವರಿಗೆ ದೂರು ನೀಡಲು ಯಾರು ತಿಳಿಸಿದರು ಎಂದರೆ ನಾನು ಬೇಡ ಎಂದರೂ ದೂರು ನೀಡಿರುತ್ತಾರೆ. ಪೊಲೀಸಿನವರು ಆಸ್ಪತ್ರೆ ಗೆ ಅಪಘಾತವಾದ ದಿನವೇ ಸಂಜೆ 6.30 ರ ಸಮಯಕ್ಕೆ ಬಂದಿದ್ದರು. ಆ ವೇಳೆ ನೀವು ಆಸ್ಪತ್ರೆ ಯಲ್ಲಿ ಇದ್ದೀರಾ ಎಂದರೆ ಹೌದು. ಆ ವೇಳೆ ಪೊಲೀಸಿನವರು ನಿಮ್ಮ ಹೆಂಡತಿಯನ್ನು ವಿಚಾರಣೆ ಮಾಡಿದ್ದಾರೆ ಎಂದರೆ ಅವರು ಮಾತನಾಡುವ ಸ್ಥಿತಿಯಲ್ಲಿ ಇರಲ್ಲಿಲ್ಲ. ಆ ವೇಳೆ ನಿಮ್ಮನ್ನು ಪೊಲೀಸಿನವರು ವಿಚಾರಣೆ ಮಾಡಿದ್ದಾರೆಯೇ ಎಂದರೆ ಮಾಡಿರುತ್ತಾರೆ. ಆ ದಿನ ಪೊಲೀಸಿನವರು ಬರವಣಿಗೆ

ಮಾಡಿಕೊಂಡು ಹೋಗಿದ್ದಾರೆಯೇ ಎಂದರೆ ಇಲ್ಲ. ಆ ದಿನ ನೀವು ಪೊಲೀಸಿನವರಿಗೆ ಕೇಸು ಮಾಡುವುದು ಬೇಡ ಎಂದು ಹೇಳಿರುತ್ತೀರಾ ಎಂದರೆ ಹೌದು.

ನಿಮ್ಮ ವಿರುದ್ಧ ಕೇಸು ದಾಖಲಾಗಿರುವ ವಿಚಾರ ಯಾವಾಗ ತಿಳಿಯಿತು ಎಂದರೆ ದೂರು ನೀಡದ ಎರಡು ದಿನಗಳ ನಂತರ ತಿಳಿಯಿತು. ಪೊಲೀಸಿನವರು ನಿಮ್ಮ ಬಳಿ ಹೇಳಿಕೆಯನ್ನು ಪಡೆದುಕೊಂಡಿದ್ದಾರೆಯೇ ಎಂದರೆ ಹೌದು. ನೀವು ವಾಹನವನ್ನು ತೆಗೆದುಕೊಂಡು ಎಷ್ಟು ವರುಷಗಳು ಆಗಿದೆ ಎಂದರೆ 8 ವರುಷಗಳು ಆಗಿದೆ. ಅಪಘಾತಕ್ಕೆ ಸಂಬಂದಿಸಿದಂತೆ ಇದು ಮೊದಲ ಪ್ರಕರಣ ಎಂದರೆ ಹೌದು. ನೀವು ಠಾಣೆಗೆ ಹೋಗಿದ್ದ ಸಮಯದಲ್ಲಿ ಪೊಲೀಸಿನವರಿಗೆ ಕೇಸು ದಾಖಲಿಸುವುದು ಬೇಡ ಎಂದು ಹೇಳಿದ್ದೀರಾ ಎಂದರೆ ಹೌದು. ದ್ವಿ ಚಕ್ರ ವಾಹನವನ್ನು ಎಲ್ಲಿ ನಿಲ್ಲಿಸಿರುತ್ತೀರಿ ಎಂದರೆ ರಸ್ತೆಯ ಡುಬ್ಬ ದಾಟಿದ ಕೂಡಲೇ ನಿಲ್ಲಿಸಿರುತ್ತೇನೆ. ರಸ್ತೆಯ ಡುಬ್ಬದಲ್ಲಿ ನೀವು ಚಾಹನ ಚಾಲನೆ ಮಾಡುವಾಗ ನಿಮ್ಮ ಹೆಂಡತಿಯವರು ಗಡಿಬಿಡಿಯಿಂದ ಏಕಾಏಕಿಯಾಗಿ ಬಿದ್ದರು ಆ ಕಾರಣದಿಂದ ಬಿದ್ದರು ಎಂದರೆ ಸರಿ. ಅಪಘಾತ ವಾದ ಕಾಲದಲ್ಲಿ ಅತೀ ವೇಗ ಹಾಗೂ ಅಜಾಗರೂತೆಯಿಂದ ವಾಹನ ಚಾಲನೆ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಅರ್ಜಿದಾರರ ಪರ ಮೇಡಮ್ ಎಸ್ ಎಸ್ ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ಮನವಿ ಮಾಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾಮತ್ತು ಎಂ.ಎ.ಸಿ.ಟಿ. ಉಡುಪಿ.